**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 4285/22

ಪಿ.ಡಬ್ಲ್ಯೂ : 5

ಸಿ.ಡಬ್ಲ್ಯೂ : 4

| | |
|---|---|
| ಸಾಕ್ಷಿದಾರರ ಹೆಸರು | : ಹರಿಶ ಕಲಬುರ್ಗಿ |
| ತಂದೆಯ ಹೆಸರು | : ಬಸಪ್ಪ ಕಲಬುರ್ಗಿ |
| ವಯಸ್ಸು | : 20 ವರ್ಷ |
| ಉದ್ಯೋಗ | : ಸರ್ಕಾರಿ ನೌಕರಿ |
| ವಾಸಸ್ಥಳ | : ದೇವರ ಹಿಪ್ಪರಗಿ |
| ಸಮಯ | : 5.00 |

ಸಾಕ್ಷಿಗೆ ಇಂದು ದಿನಾಂಕಃ 07.08.2025 ರಂದು

ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಚಾ ಸಾ 1 ನನ್ನ ತಾಯಿ ಬಸಪ್ಪ ನನ್ನ ತಂದೆ ಇದ್ದು ಸದರಿಯವರು ಸದ್ಯ ಮೃತಪಟ್ಟಿರುತ್ತಾರೆ. ಚಾ ಸಾ 5 ನನ್ನ ಸಹೋದರ ಇರುತ್ತಾರೆ. ನನಗೆ ಚಾ ಸಾ 6 ರಿಂದ 8 ರವರ ಪರಿಚಯ ಇರುತ್ತದೆ. ಮನೆಯಲ್ಲಿ ನಾನು ನನ್ನ 3 ಜನ ಅಕ್ಕಂದಿರು ಹಾಗೂ ನನ್ನ ತಮ್ಮ, ತಾಯಿ ವಾಸವಾಗಿದ್ದೇವೆ. ನನ್ನ ತಂದೆ ಜಮಖಂಡಿಯಲ್ಲಿ ರೇಷ್ಮೆ ನಿರೀಕ್ಷಕರು ಎಂದು ಕೆಲಸ ಮಾಡುತ್ತಿದ್ದರು. ವಾರದಲ್ಲಿ 3 ಬಾರಿ ನಮ್ಮ ಉ್ಾರಿಗೆ ಬಂದು ಹೋಗಿ ಮಾಡುತ್ತಿದ್ದರು. ಇಲ್ಲಿಗೆ ಬಂದಾಗ ಶಿವಣಗಿಯ ನಮ್ಮ ಜಮೀನು ನೋಡಲು ನಮ್ಮ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದರು . ನನ್ನ ತಂದೆಯ ವಾಹನ ಸಂಖ್ಯೆ ಕೆಎ 28/ಇಝಡ್ 7655 ಇರುತ್ತದೆ.

ದಿ 08-05-2022 ರಂದು ಶಿವಣಗಿಯಿಂದ ದೇವರ ಹಿಪ್ಪರಗಿಯಿಂದ ನನ್ನ ತಂದೆ ಬರುತ್ತಿದ್ದಾಗ ವೆಲ್ ಕಮ್ ದಾಬಾದ ಹತ್ತಿರ ಸದರಿಯವರಿಗೆ ಅಪಘಾತವಾಗಿರುತ್ತದೆ ಎಂದು ಚಾ ಸಾ 8 ರವರು ಫೋನ್ ಮಾಡಿ ನನ್ನ ತಮ್ಮನಿಗೆ ತಿಳಿಸಿರುತ್ತಾರೆ. ವಿಷಯ ತಿಳಿದ ನಂತರ ನಾನು ನನ್ನ ತಮ್ಮ ಹಾಗೂ ಶ್ರೀಮಂತ ಎಲ್ಲರೂ ಸೇರಿ ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆ. ಚಾ ಸಾ 8 ರವರಿಗೆ ಅಪಘಾತವಾದ ಸ್ಥಳದ ಬಗ್ಗೆ ವಿಚಾರಿಸಿರುತ್ತೇವೆ. ಸದರಿಯವರನ್ನು ವಿಚಾರಿಸಲಾಗಿ ಶಿವಣಗಿಯಿಂದ ದೇವರ ಹಿಪ್ಪರಗಿ ಮಾರ್ಗವಾಗಿ ನನ್ನ ತಂದೆ ತಮ್ಮ ವಾಹನದಲ್ಲಿ ಬರುತ್ತಿದ್ದಾಗ ದೇವರ ಹಿಪ್ಪರಗಿಯಿಂದ ಒಂದು ಲಾರಿ ತನ್ನ ಮುಂದೆ ಹೋಗುತ್ತಿದ್ದ ಲಾರಿಯನ್ನು ಓವರಟೇಕ್ ಮಾಡಿ ನನ್ನ ತಂದೆ ದ್ವಿಚಕ್ರವಾಹನಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ . ಆಗ ಚಾ ಸಾ 8 ರವರು ತಮ್ಮ ಸ್ನೇಹಿತರೊಂದಿಗೆ ವೆಲ್ ಕಮ್ ದಾಬಾದಲ್ಲಿ ಇರುವುದಾಗಿ ತಿಳಿಸಿದರು.

ನಂತರ ನಾನು ನನ್ನ ತಮ್ಮ ಹಾಗೂ ಚಾ ಸಾ 9 ರವರು ಆ್ಯಂಬುಲೇನ್ಸ ಮುಖಾಂತರ ನನ್ನ ತಂದೆಯನ್ನು ವಿಜಯಪುರದ ಬಿ ಎಲ್ ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನನ್ನ ತಂದೆ ತಲೆಗೆ,ತುಟಿಗೆ ಗಾಯವಾಗಿರುತ್ತವೆ. ನಾವು ನಮ್ಮ ತಂದೆಯನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತಪಡಿಸಿದ ಎನ್ನಲಾದ ವಾಹನದ ಸಂಖ್ಯೆ ಕೆಎ 32/ ಡಿ/9416 ಅಂತಾ ಇರುತ್ತದೆ. ಅಪಘಾತವಾದಾಗ ರಾತ್ರಿ 9.30 ಗಂಟೆ ಆಗಿತ್ತು .

ಅಪಘಾತವಾದ ನಂತರ ಲಾರಿ ಚಾಲಕನು ಸ್ಥಳದಿಂದ ಓಡಿ ಹೋಗಿದ್ದನು. ಈ ವಿಷಯವಾಗಿ ಚಾ ಸಾ 1 ರವರು ದಿನಾಂಕ 09-05-22 ರಂದು ದೂರನ್ನು ನೀಡಿರುತ್ತಾರೆ. ಅಪಘಾತ ವಿಷಯ ನಾನು ಸಹ ಪೋಲಿಸರಿಗೆ ಹೇಳಿಕೆ

ನೀಡಿರುತ್ತೇನೆ . ದೂರನ್ನು ನೀಡಿದ ಒಂದು ವಾರದ ನಂತರ ಪುನಃ ನಾವು ಠಾಣೆಗೆ ಹೋಗಿದ್ದೆವು.

ನಾನು ಪೋಲಿಸ್ ಠಾಣೆಗೆ ಹೋದ ಸಂದರ್ಭದಲ್ಲಿ ಅಪಘಾತಪಡಿಸಿದ ವ್ಯಕ್ತಿ ಗಜಾನನ ಎಂಬುವವರು ಠಾಣೆಯಲ್ಲಿದ್ದು ಸದರಿ ವ್ಯಕ್ತಿ ನ್ಯಾಯಾಲಯದ ಮುಂದೆ ಇರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದ</u>**

ನನ್ನ ತಂದೆ ಅಪಘಾತವಾದ ಸಂದರ್ಭದಲ್ಲಿ ನಾನು ವಿದ್ಯಾಭ್ಯಾಸ ಮಾಡುತ್ತಿದ್ದು ಅಪಘಾತವಾದ ದಿನದಂದು ನಾನು ದೇವರ ಹಿಪ್ಪರಗಿಯಲ್ಲಿದ್ದೆನು. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೆನೆ ಎಂದರೆ ಸಾಕ್ಷಿ ಅಪಘಾತವಾದಾ ನಾನು ನೋಡಿರುತ್ತೇನೆ ಎಂದು ಹೇಳುತ್ತಾರೆ. ಅಪಘಾತವಾದ ವಿಷಯ ತಿಳಿದು ನಾನು ನನ್ನ ತಮ್ಮ ಚಾ ಸಾ 9 ರವರು ಹೋದಾಗ ಆರೋಪಿಯನ್ನು ನೋಡಿರುತ್ತೇವೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತ ಚಾ ಸಾ 8 ಮತ್ತು ಅವರ ಸ್ನೇಹಿತರು ನೋಡಿದ್ದಾಗಿ ಹೇಳಿದ್ದು ಅವರೆ ನನ್ನ ತಮ್ಮನಿಗೆ ಪೋನ್ ಮಾಡಿ ತಿಳಿಸಿರುತ್ತಾರೆ. ಅಪಘಾತಕ್ಕೆ ಒಳಪಟ್ಟ ವಾಹನವನ್ನು ನಾವು ಓಡಾಡಲು ಉಪಯೋಗಿಸುತ್ತಿದ್ದೇವು ಎಂದರೆ ಸರಿ. ಜಮಖಂಡಿಯಿಂದ ದೇವರ ಹಿಪ್ಪರಗಿಗೆ ಸಾಕ್ಷಿ ತಂದೆ ಹೇಗೆ ಬರುತ್ತಿದ್ದರು ಎಂದರೆ ಬಸ್ಸಿನಲ್ಲಿ ಬರುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಅಪಘಾತ ದಿನದಂದು ಶಿವಣಗಿಯಿಂದ ಬರುವಾಗ ರಾತ್ರಿ ಆಗಿದ್ದು ವಾಹನಗಳ ಬೆಳಕು ಕಣ್ಣಿಗೆ

ತಾಗುತ್ತಿದ್ದರಿಂದ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಆರೋಪಿಯ ಹೆಸರು ಮತ್ತು ವಿಳಾಸ ವಿಚಾರಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ.

ಅಪಘಾತ ಆಗಿರುವ ಸ್ಥಳಕ್ಕೂ ಹಾಗೂ ತಮ್ಮ ಮನೆಗೆ ಎಷ್ಟು ಅಂತರ ಇರುತ್ತದೆ ಎಂದರೆ ಸಾಕ್ಷಿ 1 ಕಿಮಿ ಅಂತರ ಇರುತ್ತದೆ ಎಂದು ನುಡಿದಿರುತ್ತಾರೆ. ಸ್ಥಳಕ್ಕೆ ಹೋದಾಗ ಜನರ ಸೇರಿದ್ದರಾ ಎಂದರೆ ಸಾಕ್ಷಿ ಸೇರಿದ್ದರು ಎಂದು ನುಡಿದಿರುತ್ತಾರೆ. ಆರೋಪಿ ಸ್ಥಳದಲ್ಲಿದ್ದರು ಸಹ ನಮ್ಮ ತಂದೆಗೆ ಅಪಘಾತ ಆಗಿರುವ ಆಪಘಾತದಲ್ಲಿ ಆತನನ್ನು ನೋಡದೇ ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಸರಿಯಾಗಿ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಪರಿಹಾರ ಹಣ ಪಡೆಯುವ ಉದ್ದೇಶದಿಂದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನನ್ನ ತಂದೆ ವಾಹನಾ ಚಾಲನಾ ಪರವಾನಿಗೆ ಇದ್ದಿರಲ್ಲಿ ಎಂದರೆ ಸರಿಯಲ್ಲ. ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.